## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 190

ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 12-08-2025

ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರದ ಹೃದಯ ಭಾಗದಲ್ಲಿರುವ "ಲಾಲಗೇರಿ" ಕ್ರಾಸ್ ಬಳಿ ಸುಮಾರು ತಿಂಗಳುಗಳಿಂದ ನಡೆಯುತ್ತಿರುವ ರಾಜ ಕಾಲುವೆ ಕಾಮಗಾರಿ ಇದುವರೆವಿಗೂ ಪೂರ್ಣಗೊಳ್ಳದಿರಲು ಕಾರಣವೇನು; (ವಿವರ ನೀಡುವುದು) | ಕಲಬುರಗಿ ನಗರದ "ಲಾಲಗೇರಿ" ಕ್ರಾಸ್‌ನಿಂದ ರಾಜ ಕಾಲುವೆ ನಿರ್ಮಾಣದ ಕಾಮಗಾರಿಯನ್ನು ದಿನಾಂಕ: **05-11-2024** ರಂದು ಪ್ರಾರಂಭಿಸಲಾಗಿರುತ್ತದೆ. ಸದರಿ ಬಡಾವಣೆಯ ಸಾರ್ವಜನಿಕರು ಮಾರ್ಗ ಬದಲಾವಣೆಗಾಗಿ ತಕರಾರು ಮಾಡಿರುವುದರಿಂದ ಹಾಗೂ ಸದರಿ ನಿರ್ಮಾಣ ಸ್ಥಳದಲ್ಲಿ ಮುಖ್ಯ ಕುಡಿಯುವ ನೀರಿನ ಪೈಪಲೈನ್‌ಗಳು ಮತ್ತು ಒಳಚರಂಡಿ ಪೈಪಲೈನ್‌ಗಳು, ವಿದ್ಯುತ್ ಕಂಬಗಳು ಸ್ಥಳಾಂತರಿಸ ಬೇಕಾಗಿರುವುದರಿಂದ ಹಾಗೂ ಪ್ರಮುಖ ಸಂಚಾರ ರಸ್ತೆ ಇರುವುದರಿಂದ ಕಾಮಗಾರಿಯು ವಿಳಂಭವಾಗಿರುತ್ತದೆ.<br><br>ಪ್ರಸ್ತುತ, ಒಟ್ಟು **480** ಮೀಟರ್ ರಾಜ ಕಾಲುವೆ ಉದ್ದದ ಕಾಮಗಾರಿಯಲ್ಲಿ **450** ಮೀಟರ್ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ. |
| (ಆ) | "ಲಾಲಗೇರಿ" ಕ್ರಾಸ್ ಬಳಿ ನಿರ್ಮಾಣ ಹಂತದಲ್ಲಿರುವ ರಾಜ ಕಾಲುವೆ ಹಾಗೂ ರಸ್ತೆಗೆ ನಿಗಧಿಪಡಿಸಿರುವ ಹಣ ಎಷ್ಟು; ಇದರಲ್ಲಿ ಎಷ್ಟು ಹಣ ಈಗಾಗಲೇ ವೆಚ್ಚ ಮಾಡಲಾಗಿದೆ; (ವಿವರ ನೀಡುವುದು) | ಕಲಬುರಗಿ ಮಹಾನಗರ ಪಾಲಿಕೆಯ 2024-25ನೇ ಸಾಲಿನ ಕಲ್ಯಾಣ ಪ್ರದೇಶ ಅಭಿವೃದ್ಧಿ ಮಂಡಳಿ ಮ್ಯಾಕ್ರೋ ಅನುದಾನದಲ್ಲಿ "ಲಾಲಗೇರಿ" ಕ್ರಾಸ್ ಬಳಿ ನಿರ್ಮಾಣ ಹಂತದಲ್ಲಿರುವ ರಾಜ ಕಾಲುವೆ ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗೆ ಅಂದಾಜು ಮೊತ್ತ ರೂ. 370.00 ಲಕ್ಷಗಳಿಗೆ ಅನುಮೋದನೆ ಯಾಗಿರುತ್ತದೆ. ಸದರಿ ಕಾಮಗಾರಿಗೆ ಈಗಾಗಲೇ ಮೊತ್ತ ರೂ.116.09 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| (ಇ) | ಸದರಿ ಕಾಮಗಾರಿ ಪ್ರಾರಂಭವಾದಗಿನಿಂದ ಇದುವರೆವಿಗೂ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆಗಳನ್ನು ಗಮನಿಸಿ ಸರ್ಕಾರ ಕೂಡಲೇ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಎಂದಿನಿಂದ ಅವಕಾಶ ನೀಡಲಾಗುವುದು? | ಸದರಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ದಿನಾಂಕ: 30.09.2025ರ ವರೆಗೆ ನಿಗದಿಪಡಿಸಲಾಗಿದೆ. ಆ ನಂತರ ಸಾರ್ವಜನಿಕರ ಬಳಕೆಗೆ ಅವಕಾಶ ನೀಡಲಾಗುವುದು. |

**ನಅಇ 46 ಎಸಿಜಿ 2025(ಇ)**

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.